RNU AIR DHARWAD

# DECEMBER 17, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಕೊಡಗಿನ ಕಾವೇರಿ ನದಿ ನೀರಿನ, ಪ್ರಸ್ತುತ ಸ್ಥಿತಿಗತಿ, ತಜ್ಞರ ಸಮಿತಿಯಿಂದ ಅಧ್ಯಯನ.**
- **ಭ್ರೂಣ ಪತ್ತೆ ಮತ್ತು ಹತ್ಯೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ, ಕಟ್ಟುನಿಟ್ಟಿನ ಕಾನೂನು ಕ್ರಮ.**
- **ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ, ವಿವಿಧ ಪಕ್ಷಗಳ ಶಾಸಕರನ್ನು ಸದಸ್ಯರನ್ನಾಗಿ ನೇಮಿಸಲು, ಸರ್ಕಾರದ ಚಿಂತನೆ.**
- **ಮಂಡ್ಯದ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ: ನುಡಿ ತೇರನೆಳೆಯಲು, ಇನ್ನು ಮೂರೇ ದಿನ ಬಾಕಿ.**
- **ವೃಕ್ಷ ಮಾತೆ, ತುಳಸಿ ಗೌಡ ಅಂಕೋಲೆಯಲ್ಲಿ ನಿಧನ.**

<><><>

**ಈಗ ವಾರ್ತೆಗಳ ವಿವರ**

<><><>

**ಕೊಡಗಿನ ಕಾವೇರಿ ನದಿಗೆ ಒಳಚರಂಡಿ ನೀರು, ಕೈಗಾರಿಕೆಗಳ ಘನ ತ್ಯಾಜ್ಯ ಹಾಗೂ ಇತರೆ ಮಲಿನಕಾರಕಗಳು ಸೇರದಂತೆ, ಸಮಗ್ರ ಕಾರ್ಯನೀತಿ ರೂಪಿಸಬೇಕಾಗಿದೆ ಎಂದು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ವಿಧಾನ ಪರಿ ‘ತ್ ಸದಸ್ಯ ಎಂ.ಪಿ. ಕುಶಾಲಪ್ಪ ಅವರ, ಚುಕ್ಕೆ ಗುರುತಿನ ಪ್ರಶ್ನೆಗೆ ಸಚಿವರು ಉತ್ತರಿಸಿದರು. ಕಾವೇರಿ ನದಿ ನೀರಿನ ಪ್ರಸ್ತುತ ಸ್ಥಿತಿ ಬಗ್ಗೆ ಅಧ್ಯಯನ ನಡೆಸಲು, ತಜ್ಞರ ಸಮಿತಿ ರಚಿಸಲಾಗಿದೆ ಎಂದರು.**

<><><>

**2023-24ನೇ ಸಾಲಿನಲ್ಲಿ, ಡಿಸೆಂಬರ್ ವರೆಗೆ, ಭ್ರೂಣಹತ್ಯೆಗೆ ಸಂಬಂಧಿಸಿ, ರಾಜ್ಯದಲ್ಲಿ ಒಟ್ಟು 8 ಪ್ರಕರಣಗಳು ದಾಖಲಾಗಿದ್ದು, 46 ಜನರನ್ನು ಬಂಧಿಸಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ವಿಧಾನ ಪರಿ ‘ತ್ತಿನಲ್ಲಿ ಶಾಸಕ, ಜಗದೇವ ಗುತ್ತೇದಾರ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, ವಿಶೇಷವಾಗಿ, ಹೆಣ್ಣು ಭ್ರೂಣ ಹತ್ಯೆ ತಡೆಯಲು, ರಾಜ್ಯ ಸರ್ಕಾರ, ಪಿ.ಸಿ. ಆಂಡ್ ಪಿ.ಎನ್.ಡಿ.ಟಿ. ಕಾಯ್ದೆಯಡಿ, ಶಾಸನ ಬದ್ಧ ಸಮಿತಿಗಳನ್ನು ಎಲ್ಲ ಜಿಲ್ಲೆಗಳಲ್ಲಿ ರಚಿಸಿದೆ ಎಂದರು.**

<><><>

ರಾಜ್ಯದಲ್ಲಿ ಸಿಸೇರಿಯನ್ ಹೆರಿಗೆ ಪ್ರಮಾಣ, ಶೇಕಡ 46 ರಷ್ಟಿದೆ. ಸರಕಾರಿ ಆಸ್ಪತ್ರೆಯಲ್ಲಿ ಶೇಕಡ 36 ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಶೇಕಡ 61 ರಷ್ಟಿದೆ. ಅನಗತ್ಯ ಸಿಸೆರಿಯನ್ ಹೆರಿಗೆ ತಡೆಗಟ್ಟಲು, ಜನವರಿಯಲ್ಲಿ, ಸರ್ಕಾರ ವಿಶೇ ' ಯೋಜನೆ ಪ್ರಕಟಿಸಲಿದೆ ಎಂದು ಸಚಿವ ದಿನೇಶ ಗುಂಡೂರಾವ ಹೇಳಿದರು.

<><><>

ರಾಜ್ಯದಲ್ಲಿ ಭ್ರೂಣ ಹತ್ಯೆ ಹೆಚ್ಚಳ ಕಳವಳಕಾರಿ. ಅಂತಹ ಆಸ್ಪತ್ರೆ, ಕ್ಲಿನಿಕ್ ಮತ್ತು ವೈದ್ಯರ ಮೇಲೆ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ, ಕೆ.ಟಿ. ತಿಪ್ಪೇಸ್ವಾಮಿ ಹೇಳಿದ್ದಾರೆ. ದಕ್ಷಿಣಕನ್ನಡ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ, ಮಕ್ಕಳ ರಕ್ಷಣಾ ಕಾಯ್ದೆ ಅರಿವು ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. 2016 ರಲ್ಲಿ ಮಕ್ಕಳ ರಕ್ಷಣಾ ನೀತಿ ಜಾರಿಗೆ ಬಂದಿದೆ. ಹೆಣ್ಣು ಭ್ರೂಣ ಹತ್ಯೆ ಅವ್ಯಾಹತವಾಗಿ ಮುಂದುವರೆದಿದೆ ಎಂದು, ಅವರು ಕಳವಳ ವ್ಯಕ್ತ ಪಡಿಸಿದರು.

<><><>

ಕಲಬುರಗಿಯಲ್ಲಿ, ಪ್ರಧಾನ ಕಚೇರಿ ಹೊಂದಿರುವ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ, ಆಡಳಿತ ಪಕ್ಷದ ಶಾಸಕರು ಸೇರಿದಂತೆ, ವಿವಿಧ ಪಕ್ಷಗಳ ಶಾಸಕರನ್ನು ಕೂಡ, ಸದಸ್ಯರನ್ನಾಗಿ ನೇಮಕ ಮಾಡಲು, ಸರ್ಕಾರ ಚಿಂತನೆ ನಡೆಸಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ವಿಧಾನಸಭೆಯಲ್ಲಿ ಉತ್ತರ ಕರ್ನಾಟಕ ಅಭಿವೃದ್ಧಿ ಬಗೆಗಿನ ಚರ್ಚೆಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಮಲ್ಲಿಕಾರ್ಜುನ ಖರ್ಗೆ ಅವರ ಪ್ರಯತ್ನದ ಫಲವಾಗಿ, ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 371 (ಜೆ) ಕಲಂ ಅಡಿ, ವಿಶೇ ' ಸ್ಥಾನಮಾನ ದೊರೆತಿದೆ ಎಂದರು.

<><><>

ನವಲಗುಂದ ಶಾಸಕ ಎನ್.ಎಚ್.ಕೋನರೆಡ್ಡಿ ಮಾತನಾಡಿ, ಕಲ್ಯಾಣ ಕರ್ನಾಟಕದ ಮಾದರಿಯಲ್ಲಿಯೇ, ಕಿತ್ತೂರು ಕರ್ನಾಟಕದ ಅಭಿವೃದ್ಧಿಗೆ, 371 ಜೆ ವಿಶೇ ' ಸ್ಥಾನಮಾನ ನೀಡುವಂತೆ ಒತ್ತಾಯಿಸುವ ನಿರ್ಣಯ ಕೈಗೊಳ್ಳಬೇಕು ಎಂದು, ಸದನವನ್ನು ಆಗ್ರಹಿಸಿದರು. ಕಿತ್ತೂರು ಕರ್ನಾಟಕ ಹಿಂದುಳಿದಿದ್ದು, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳು ಹಾಳಾಗಿದ್ದು, ಅವುಗಳನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

<><><>

ಪ್ರಧಾನಮಂತ್ರಿಯವರ, ಉದ್ಯೋಗ ಸೃಜನೆ, ಕೇಂದ್ರ ಪುರಸ್ಕೃತ ಯೋಜನೆ ಅಡಿ, ಬಾಗಲಕೋಟೆಯ ಶಿಕ್ಷಕಿ ವಿದ್ಯಾಶ್ರೀ ರಾಜಶೇಖರ ಹಿರೇಮಠ, 21 ಲಕ್ಷ 50 ಸಾವಿರ ರೂಪಾಯಿ ಸಬ್ಸಿಡಿ ಸಾಲ ಪಡೆದು, ಶ್ರೀ ಪ್ರಭುಲಿಂಗೇಶ್ವರ ಗಾರ್ಮೆಂಟ್ಸ್ ಉದ್ಯಮ ಪ್ರಾರಂಭಿಸಿದ್ದಾರೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅವರ ಉದ್ಯಮಿಯಾಗುವ ಕನಸಿಗೆ, ಹಣಕಾಸಿನ ಸಾಲ ಸೌಲಭ್ಯ ಒದಗಿಸಿ, ನನಸಾಗುವಂತೆ ಮಾಡಿದೆ. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ, ಯುವ ಉದ್ಯಮಿ ವಿದ್ಯಾಶ್ರೀ ಹಿರೇಮಠ.

<><><>

ಯುವ ಉದ್ಯಮಿ ವಿದ್ಯಾಶ್ರೀ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಂಡ್ಯದಲ್ಲಿ ಇದೇ 20 ರಿಂದ ಆಯೋಜಿತ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ, ದಿನ ಗಣನೆ ಆರಂಭವಾಗಿದೆ. ಸಮ್ಮೇಳನದ ಸರ್ವಾಧ್ಯಕ್ಷ ನಾಡೋಜ ಗೊ.ರು. ಚನ್ನಬಸಪ್ಪ ಅವರ ವೈಭವಯುತ ಮೆರವಣಿಗೆಗೆ,

ವಿಶೇ ’ ರಥ ನಿರ್ಮಾಣವಾಗುತ್ತಿದೆ. 887 ಮಹಿಳೆಯರು ಪೂರ್ಣ ಕುಂಭದೊಂದಿಗೆ, ಸಾಗಲಿದ್ದಾರೆ. ಜಾನಪದ ಕಲಾತಂಡಗಳು, ನಾಲ್ಕು ಸಾವಿರ ಕಲಾವಿದರು, ಮೆರವಣಿಗೆಯ ಮೆರಗು ಹೆಚ್ಚಿಸಲಿದ್ದಾರೆ.

<><><>

ಕನ್ನಡ ನಾಡು-ನುಡಿಗೆ 8 ಜ್ಞಾನಪೀಠಗಳನ್ನು ತಂದುಕೊಟ್ಟ ಮಹನೀಯರ, ಭಾವಚಿತ್ರಗಳನ್ನು ವಿಶೇಷವಾಗಿ, ಸಿದ್ಧ ಪಡಿಸಲಾಗುತ್ತಿದೆ.

<><><>

ಸಮ್ಮೇಳನ ನಡೆಯಲಿರುವ 60 ಎಕರೆ ಜಾಗದಲ್ಲಿ, ಸಾವಿರಕ್ಕೂ ಹೆಚ್ಚು ಮಳಿಗೆಗಳು, 450 ಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ.

<><><>

ಮುಂಬಯಿಯ ಎಸ್ಪಿ ಜೈನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ & ರಿಸರ್ಚ್ ಕೊಡಮಾಡುವ, ಪ್ರತಿಷ್ಠಿತ 'ಸೋಷಿಯಲ್ ಇಂಪಾಕ್ಟ್ ಅವಾರ್ಡ್' ಗೆ, ಮೈಸೂರು ಮೂಲದ, ರೈತರ ಮಾಲಿಕತ್ವದ, ದೇಸಿ ಬೀಜೋತ್ಪಾದಕ ಕಂಪೆನಿ, ಭಾಜನವಾಗಿದೆ. ಸಹಜ ಸೀಡ್ಸ್ ಬ್ರಾಂಡ್ ಮೂಲಕ ದೇಸಿ ಬೀಜಗಳನ್ನು ಮಾರಾಟ ಮಾಡುತ್ತಿರುವ, ನಾಡು ತಳಿ ಬೀಜ ಸಂರಕ್ಷಣೆ, ರೈತರ ಆದಾಯ ಹೆಚ್ಚಳ, ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಕಾರ್ಯಗಳನ್ನು ಗುರುತಿಸಿ 'ಸಾಮಾಜಿಕ ಪರಿಣಾಮ ಪ್ರಶಸ್ತಿ' ನೀಡಿ, ಗೌರವಿಸಲಾಗಿದೆ.

<><><>

1 ಲಕ್ಷ ರೂಪಾಯಿ ನಗದು ಪುರಸ್ಕಾರ ಮತ್ತು ಪ್ರಶಸ್ತಿ ಫಲಕವನ್ನು, ಸಹಜ ಸೀಡ್ಸ್ ಪರವಾಗಿ, ಸಂಸ್ಥಾಪಕಿ ಸೀಮಾ ಪ್ರಸಾದ್, ನಿರ್ದೇಶಕ ಸಿದ್ದನಹುಂಡಿ ಶ್ರೀನಿವಾಸ ಮೂರ್ತಿ, ಮತ್ತು ಬೀಜೋತ್ಪಾದನಾ ವಿಭಾಗದ ಮುಖ್ಯಸ್ಥ ಮಂಜು ಕೆ.ಎಸ್., ಮುಂಬೈಯಲ್ಲಿ, ಸ್ವೀಕರಿಸಿದರು.

<><><>

ರೆಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತ, ಬೆಜವಾಡ ವಿಲ್ಸನ್ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

<><><>

ಸಹಜ ಸೀಡ್ಸನ ಸಂಸ್ಥಾಪಕ ಜಿ. ಕೃ ಣ ಪ್ರಸಾದ್ ಪ್ರದೇಶ ಸಮಾಚಾರಕ್ಕಾಗಿ, ಹ ್ಷ ವ್ಯಕ್ತಪಡಿಸಿದ್ದಾರೆ.

<><><>

ಜಿ. ಕೃಷ್ಣಪ್ರಸಾದ ಧ್ವನಿ 60 ಸೆಕೆಂದುಗಳು

<><><>

ಉನ್ನತ ಶಿಕ್ಷಣ ಇಲಾಖೆ ಹಾಗೂ ಭಾರತದ ಬ್ರಿಟಿ ್ ಹೈ ಕಮಿ ನ್ ಸಹಯೋಗದಲ್ಲಿ, ಮಹಿಳಾ ಪದವಿಧರೆಯರು, ಅಂತಾರಾಷ್ಟ್ರೀಯ ಸ್ನಾತಕೋತ್ತರ ವಿದ್ಯಾರ್ಥಿ ವೇತನ ಪಡೆದು, ಅಧ್ಯಯನ ನಡೆಸಲು ಅನುವಾಗುವ, ಚಿವ್ನಿಂಗ್ ಕರ್ನಾಟಕ ಸ್ನಾತಕೋತ್ತರ ವಿದ್ಯಾರ್ಥಿ ವೇತನ ಒಡಂಬಡಿಕೆಗೆ, ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ.ಸುಧಾಕರ ಚಾಲನೆ ನೀಡಿದರು. ಬೆಳಗಾವಿ ಸುವರ್ಣಸೌಧದ ಮೂರನೇ ಮಹಡಿಯ ಸಭಾಂಗಣದಲ್ಲಿ, ಒಡಂಬಡಿಕೆಗೆ ಗಣ್ಯರು ಸಹಿ ಹಾಕಿದರು.

<><><>

ಈ ಮಧ್ಯೆ, ಪೋಸ್ಟ್ ಡಾಕ್ಟರಲ್ ಫೆಲೋಶಿಪ್ ಮಾಡುತ್ತಿರುವ, ಯಾವುದೇ ಫೆಲೋಶಿಪ್ ಪಡೆಯದ, ಪರಿಶಿ ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ, ಶಿ ್ಯವೇತನ ನೀಡಲು, ಸಮಾಜ ಕಲ್ಯಾಣ ಇಲಾಖೆ, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

<><><>

‘ವೃಕ್ಷ ಮಾತೆ’, ಪದ್ಮಶ್ರೀ ಪುರಸ್ಕೃತ, ತುಳಸಿ ಗೌಡ, ಉತ್ತರಕನ್ನಡ ಜಿಲ್ಲೆ ಅಂಕೋಲಾದ, ಹೊನ್ನಳ್ಳಿ ಗ್ರಾಮದ ಸ್ವ ಗೃಹದಲ್ಲಿ, ನಿನ್ನೆ ವಿಧಿವಶರಾದರು. ಅವರಿಗೆ 86 ವ ರ್ಷ ವಯಸ್ಸಾಗಿತ್ತು. ಹಾಲಕ್ಕಿ ಒಕ್ಕಲಿಗ ಸಮುದಾಯದ, ತುಳಸಿ ಗೌಡ ಅವರು, ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ, ಸೇವೆ ಸಲ್ಲಿಸುತ್ತಾ, ಲಕ್ಷಾಂತರ ಗಿಡಗಳನ್ನು ಬೆಳೆಸಿದ ಹಿರಿಮೆ ಹೊಂದಿದ್ದಾರೆ. ಗಣ್ಯರು ಕಂಬನಿ ಮಿಡಿದಿದ್ದಾರೆ. ಇಂದು ಬೆಳಗ್ಗೆ 11 ಗಂಟೆಗೆ, ಹೊನ್ನಳ್ಳಿಯಲ್ಲಿ ಸರ್ಕಾರಿ ಗೌರವಗಳೊಂದಿಗೆ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಲಿದೆ ಎಂದು, ಕುಟುಂಬ ವರ್ಗ ತಿಳಿಸಿದೆ.

<><><>

ಧಾರವಾಡದ ಶ್ರೀ ಮೌನೇಶ್ವರ ಧರ್ಮನಿಧಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ, ಶಿವಣ್ಣ ಬಡಿಗೇರ ಅವರು ನಿನ್ನೆ ನಿಧನರಾದರು. ಅವರಿಗೆ 93 ವರ್ಷ ವಯಸ್ಸಾಗಿತ್ತು. 3 ಬಾರಿ ಅತ್ಯುತ್ತಮ ಕೃಷಿ ಅಧಿಕಾರಿ, ರಾಜ್ಯ ಪ್ರಶಸ್ತಿಗೆ ಅವರು ಭಾಜನರಾಗಿದ್ದರು. ಇಂದು ಬೆಳಗ್ಗೆ 11 ಗಂಟೆಗೆ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಧಾರವಾಡದಲ್ಲಿ ಜರುಗಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕನ್ನಡಿಗ, ಭಾರತೀಯ ಸಮಾಚಾರ ಸೇವೆಯ ಹಿರಿಯ ಅಧಿಕಾರಿ, ಡಾಕ್ಟರ್ ಜಿ.ಡಿ. ಹಳ್ಳಿಕೇರಿ ಹೊಸ ದಿಲ್ಲಿಯ ಪ್ರೆಸ್ ಇನ್‌ಫಾರ್ಮೇಶನ್ ಬ್ಯುರೋ ನಿರ್ದೇಶಕರಾಗಿ, ಅಧಿಕಾರ ವಹಿಸಿಕೊಂಡಿದ್ದಾರೆ.

<><><>

ಸಾಮಾಜಿಕ ಹೋರಾಟಗಾರ, ಡಾಕ್ಟರ್ ಚೆನ್ನಣ್ಣ ವಾಲೀಕಾರ ಅವರ, ನಾಲ್ಕನೇ ಪುಣ್ಯತಿಥಿ ನಿಮಿತ್ತ, ವಿಚಾರ ಸಂಕಿರಣ ಇಂದು ಬೆಳಗ್ಗೆ 10:30ಕ್ಕೆ, ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ಆಯೋಜಿತವಾಗಿದೆ.

<><><>

ಶಿವಮೊಗ್ಗದ, ತ್ಯಾವರೆಕೊಪ್ಪ ಹುಲಿ-ಸಿಂಹಧಾಮ, 17, 24 ಮತ್ತು 31 ರ ಮೂರು ಮಂಗಳವಾರ, ವೀಕ್ಷಣೆಗೆ ಲಭ್ಯವಿದೆ ಎಂದು, ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕೊಡಗಿನ ಕಾವೇರಿ ನದಿ ನೀರಿನ, ಪ್ರಸ್ತುತ ಸ್ಥಿತಿಗತಿ, ತಜ್ಞರ ಸಮಿತಿಯಿಂದ ಅಧ್ಯಯನ ಆರಂಭ.
- ಭ್ರೂಣ ಪತ್ತೆ ಮತ್ತು ಹತ್ಯೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ, ಕಟ್ಟುನಿಟ್ಟಿನ ಕಾನೂನು ಕ್ರಮ.
- ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ, ವಿವಿಧ ಪಕ್ಷಗಳ ಶಾಸಕರನ್ನು ಸದಸ್ಯರನ್ನಾಗಿ ನೇಮಿಸಲು, ಸರ್ಕಾರದ ಚಿಂತನೆ.
- ಮಂಡ್ಯದ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ; ನುಡಿ ತೇರನೆಳೆಯಲು, ಇನ್ನು ಮೂರೇ ದಿನ ಬಾಕಿ.

- ವೃಕ್ಷ ಮಾತೆ, ತುಳಸಿ ಗೌಡ ಅಂಕೋಲೆಯಲ್ಲಿ ನಿಧನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ